ಆಹಾರ ಗುಣಮಟ್ಟ ಮತ್ತು ಆಹಾರ ಸುರಕ್ಷತೆ

3883(3276); ಶ್ರೀ ನಿಂಗಯ್ಯ ಬಿ.ಬಿ. (ಮೂಡಿಗೆರೆ)

ಅ) ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಆಯುಕ್ತಾಲಯ ಪ್ರತ್ಯೇಕವಾದ ನಂತರ ಆರೋಗ್ಯ ಕುಟುಂಬ ಕಲ್ಯಾಣ/ಆಯುಕ್ತಾಲಯ/ನಿರ್ದೇಶಕರ ಕಛೇರಿಗಳಲ್ಲಿ ನಡೆಸಿರುವ ಅನೂರ್ಜಿತ ಹಾಗೂ ಅನೂರ್ಜಿತಗೊಳಿಸಿದ ಪತ್ರ ವ್ಯವಹಾರಗಳು ಯಾವುವು?

ಆ) ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಆಯುಕ್ತಾಲಯ ಪ್ರತ್ಯೇಕವಾದ ನಂತರ ಆರೋಗ್ಯ ಕುಟುಂಬ ಕಲ್ಯಾಣ/ಆಯುಕ್ತಾಲಯ/ನಿರ್ದೇಶಕರ ಕಛೇರಿಗಳಲ್ಲಿ ನಡೆಸಿರುವ ಪತ್ರ ವ್ಯವಹಾರ ಅನೂರ್ಜಿತಗೊಳಿಸಲು ಸರ್ಕಾರವು ಇಲ್ಲಿಯವರೆಗೂ ತೆಗೆದುಕೊಂಡ ಕ್ರಮಗಳು ಯಾವುವು?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಆಯುಕ್ತರ ಕಾರ್ಯಾಲಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಒಂದು ಭಾಗವಾಗಿ ಕಾರ್ಯನಿರ್ವಹಿಸುತ್ತಿದೆ. ಇದು ಪ್ರತ್ಯೇಕ ಇಲಾಖೆಯಾಗಿ ಕಾರ್ಯನಿರ್ವಹಿಸುತ್ತಿಲ್ಲ.

ಆ) ಅನ್ವಯಿಸುವುದಿಲ್ಲ.

ಸಾರಿಗೆ ಸಂಸ್ಥೆಯ ಅಭಿವೃದ್ಧಿ ಕಾಮಗಾರಿ

3884(3363); ಶ್ರೀ ಪಾಟೀಲ್ ಎ.ಎಸ್ (ದೇವರಹಿಪ್ಪರಗಿ)

ಅ) ಬಿಜಾಪುರ ಜಿಲ್ಲೆಯಲ್ಲಿ ಕಳೆದ 2013–14ನೇ ಸಾಲಿನಿಂದ ಇಲ್ಲಿಯವರೆಗೆ ಈಶಾನ್ಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಯಾವ ಯೋಜನೆಗಳು/ಅಭಿವೃದ್ಧಿ ಕಾಮಗಾರಿಗಳು ಮಂಜೂರಾಗಿವೆ (ವಿಧಾನಸಭಾ ಕ್ಷೇತ್ರವಾರು ಕಾಮಗಾರಿ ಹೆಸರು ಸಮೇತ ಅನುದಾನದ ವಿವರಗಳೊಂದಿಗೆ ಮಾಹಿತಿ ಒದಗಿಸುವುದು);